**Online at:** https://researchtrendsjournal.com
**ISSN No:** 2584-282X
**Indexed Journal**
**Peer Reviewed Journal**



INTERNATIONAL JOURNAL OF TRENDS IN EMERGING RESEARCH AND DEVELOPMENT

**INTERNATIONAL JOURNAL OF TRENDS IN EMERGING RESEARCH AND DEVELOPMENT**

**Volume 3; Issue 6; 2025; Page No. 80-83**

**Received: 01-08-2025**
**Accepted: 06-10-2025**
**Published: 07-11-2025**

# ಸಾಗರತಟದ ಅಚಲ ಶಕ್ತಿ: ಉಳ್ಳಾಲದ ರಾಣಿ ಅಬ್ಬಕ್ಕ ದೇವಿ

**Dr. Shaila KN**

Associate Professor, Department of History, Government Arts college, Dr. B.R Ambedkar Veedhi, Bangalore, India

**DOI:** https://doi.org/10.5281/zenodo.18198272

**Corresponding Author:** Dr. Shaila KN

**Abstract**

ಕರಾವಳಿ ಕರ್ನಾಟಕದ ಉಳ್ಳಾಲವನ್ನು ಆಳಿದ ರಾಣಿ ಅಬ್ಬಕ್ಕ ದೇವಿ ವಸಾಹತುಶಾಹಿ ಶಕ್ತಿಗಳಿಗೆ ಸವಾಲೊಡ್ಡಿದ ಅಪೂರ್ವ ವೀರಾಂಗನೆಯೂ ಹೌದು. ವಿಭಿನ್ನ ಜಾತಿ–ಧರ್ಮಗಳ ಜನರನ್ನು ಒಗ್ಗೂಡಿಸಿಕೊಂಡು, ಆರ್ಥಿಕ ಸ್ವಾವಲಂಬನೆ ಮತ್ತು ರಾಜಕೀಯ ಸ್ವಾಭಿಮಾನವನ್ನು ಕಾಪಾಡುವಲ್ಲಿ ಅಬ್ಬಕ್ಕ ದೇವಿಯ ಪಾತ್ರ ವಿಶಿಷ್ಟವಾಗಿದೆ. ಪೋರ್ಚುಗೀಸರು ಕರಾವಳಿ ಕರ್ನಾಟಕದಲ್ಲಿ ವ್ಯಾಪಾರ ವಹಿವಾಟಿನ ಮೂಲಕ ಆರ್ಥಿಕ ಶೋಷಣೆಗೆ ಯತ್ನಿಸಿದಾಗ, ಕಪ್ಪ ಕಾಣಿಕೆ ಹಾಗೂ ತೆರಿಗೆಗಳನ್ನು ತಿರಸ್ಕರಿಸಿ ಜನಬೆಂಬಲದೊಂದಿಗೆ ಆಕೆ ದಿಟ್ಟ ಪ್ರತಿರೋಧವನ್ನು ಸಂಘಟಿಸಿದಳು. ವಿದೇಶಿ ಪ್ರವಾಸಿಗರ ವರದಿಗಳು ಮತ್ತು ಪೋರ್ಚುಗೀಸ್ ದಾಖಲೆಗಳ ಆಧಾರದಲ್ಲಿ ಅಬ್ಬಕ್ಕ ದೇವಿಯರ ಆಡಳಿತ, ಅವರ ರಾಜಕೀಯ ಚಾತುರ್ಯ ಮತ್ತು ಜನಪರ ನಿಲುವುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಈ ಲೇಖನವು ಅಬ್ಬಕ್ಕ ದೇವಿಯನ್ನು ಕೇವಲ ವಸಾಹತು ವಿರೋಧಿ ಹೋರಾಟಗಾರ್ತಿಯಾಗಿ ಮಾತ್ರವಲ್ಲದೆ, ಆರ್ಥಿಕ ಶೋಷಣೆ, ರಾಜಕೀಯ ದಬ್ಬಾಳಿಕೆ ಮತ್ತು ಸಾಮಾಜಿಕ ಅಸಮಾನತೆಗಳ ವಿರುದ್ಧ ಹೋರಾಡಿದ ಸ್ವಾಭಿಮಾನಿಯಾಗಿ ವಿವಿಧ ಮಜಲುಗಳನ್ನು ಅನಾವರಣಗೊಳಿಸುತ್ತದೆ.

**Keywords:** ರಾಣಿ ಅಬ್ಬಕ್ಕ ದೇವಿ, ಚೌಟ ವಂಶ, ಉಳ್ಳಾಲ, ಕರಾವಳಿ ಕರ್ನಾಟಕ, ಪೋರ್ಚುಗೀಸರು, ವಸಾಹತುಶಕ್ತಿ, ವಿದೇಶಿ ವ್ಯಾಪಾರ, ಸ್ವಾಭಿಮಾನ

## ಪರಿಚಯ

ಅಬ್ಬಕ್ಕ ಎನ್ನುವ ಹೆಸರು ಚೌಟ ಕುಲದಲ್ಲಿ ಹುಟ್ಟಿ, ಕರಾವಳಿ ಕರ್ನಾಟಕದಲ್ಲಿ ಬೆಳೆದು ಕಡಲಾಚೆಗೆ ವಿಸ್ತರಿಸಿ ಬಹುರೂಪಿ ಸಂಗತಿಗಳ ಒಂದು ಅನನ್ಯತೆಯ ರೂಪವಾಗಿ ಜನಮಾನಸದಲ್ಲಿ ಬೇರೂರಿದೆ. ಪುಟ್ಟ ಸಾಮಂತಳಾದ ಅಬ್ಬಕ್ಕನದು ಪರಕೀಯರನ್ನು ಗೆದ್ದ ದೊಡ್ಡ ಕೀರ್ತಿ. ಉಳ್ಳಾಲ ಸೋಮೇಶ್ವರದ ಭಾಗಗಳಲ್ಲಿ ವಿವಿಧ ಸಮುದಾಯಗಳಿಗೆ ಸೇರಿದ ಮಂದಿ ವಾಸ್ತವ್ಯವಿದ್ದು, ಮೊಗವೀರರು ಮೀನುಗಾರಿಕೆಯಲ್ಲೂ, ಮುಸಲ್ಮಾನ ಜೈನ ಸಮುದಾಯಗಳ ಜನರು ವ್ಯಾಪಾರ ಚಟುವಟಿಕೆಗಳಲ್ಲೂ ಈ ಪ್ರದೇಶದಲ್ಲಿ ತೊಡಗಿಸಿಕೊಂಡಿದ್ದರು.

ಅಬ್ಬಕ್ಕ ದೇವಿಯರುಗಳನ್ನು ಅಧ್ಯಯನ ಮಾಡುವಾಗ ವಿದೇಶಿ ದಾಖಲೆಗಳು ಸ್ಥಳೀಯ ದಾಖಲೆಗಳಿಗಿಂತಲೂ ಹೆಚ್ಚಾಗಿ ಕಂಡುಬರುತ್ತದೆ. ಕೆಲವೇ ಸ್ಥಳೀಯ ದಾಖಲೆಗಳು ಇತ್ತೀಚೆಗೆ ಬೆಳಕಿಗೆ ಬಂದಿದೆ. ಉದಾಹರಣೆಗೆ ಕ್ರಿ. ಶ 1554 - 1584 ರವರೆಗೆ ಆಳ್ವಿಕೆ ನಡೆಸಿದ ಹಿರಿಯ ಅಬ್ಬಕ್ಕ ದೇವಿಯ ಕುರಿತಾಗಿ ಎರಡೇ ತಾಮ್ರ ಶಾಸನಗಳು ಪತ್ತೆಯಾಗಿವೆ. ಆದರೆ ಕ್ರಿ. ಶ 1595 - 1640 ರವರೆಗೆ ಆಳಿದ ಕಿರಿಯ ಅಬ್ಬಕ್ಕ ದೇವಿಯರ ಕುರಿತಾಗಿ ಯಾವ ಸ್ಥಳೀಯ ದಾಖಲೆಗಳು ಲಭ್ಯವಿಲ್ಲ. ಸಮಕಾಲೀನ ವಿದೇಶಿ ಪ್ರವಾಸಿಗರಲ್ಲಿ ಫ್ರಾನ್ಸಿಸ್ಕೊ ಡಿಸೋಜಾ, ಡಚ್ ಪ್ರವಾಸಿ ಲಿನಿ ಕೋಸ್ಟನ್, ಫ್ರೆಂಚ್ ಪ್ರವಾಸಿ ಪೈರಾರ್ಡ್ ಮತ್ತು ಇಟಲಿಯ ಪಿಯತ್ರೋ ದೆಲ್ಲವಲ್ಲೆಯವರು ಪ್ರಮುಖರು.

ವಿದ್ವಾಂಸರುಗಳಾದ ಗಣಪತಿ ರಾವ್ ಐಗಳು, ಡಾ. ಕೆ ವಿ ರಮೇಶ, ಡಾ. ಪಿ. ಗುರುರಾಜ ಭಟ್ಟ, ಡಾ ಕೆ. ಜಿ ವಸಂತ ಮಾಧವ, ಸೂರ್ಯನಾಥ ಕಾಮತ್ ಇವರುಗಳು ಅಬ್ಬಕ್ಕದೇವಿಯರ ಕುರಿತು ಅಧ್ಯಯನ ನಡೆಸಿರುತ್ತಾರೆ. ಮೂಲ ಸಾಮಗ್ರಿಯಾಗಿ ಪೋರ್ಚುಗೀಸರ ದಾಖಲೆಗಳು, ವಿದೇಶಿ ಪ್ರವಾಸಿಗರ ವರದಿಗಳು ಮುಖ್ಯವಾಗಿ ಇಟಲಿಯ

ಪಿಯತ್ರೋ ದೆಲ್ಲವೆಲ್ಲೆಯ ಬರವಣಿಗೆಗಳನ್ನು ಈ ಲೇಖನದಲ್ಲಿ ಬಳಸಿಕೊಳ್ಳಲಾಗಿದೆ.

ಪ್ರಾಚೀನ ಕಾಲದಿಂದಲೂ ತುಳುನಾಡು ಅನೇಕ ಆಳರಸರು ಮತ್ತು ತುಂಡರಸರು ಆಳ್ವಿಕೆ ನಡೆಸಿದ ಬೀಡಾಗಿ ಕೆಲವು ಅರಸುಮನೆತನಗಳು ಇಲ್ಲಿ ಹೆಚ್ಚು ಕಾಲ ಅಧಿಕಾರವನ್ನು ವಹಿಸಿದ್ದು, ಇಲ್ಲಿನ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದವು. ಆದರೆ ಅಳುಪ ಅರಸು ಮನೆತನ ಬಲಿಷ್ಠ ರಾಜಕೀಯ ಶಕ್ತಿಯಾಗಿ ಹೆಚ್ಚು ಕಾಲ ಆಳ್ವಿಕೆ ನಡೆಸಿದ ಅರಸು ಮನೆತನವಾಗಿದೆ. ಸ್ಥಳೀಯ ಅರಸರ ಅಧಿಕಾರವನ್ನು ಗೌರವಿಸಿದ ವಿಜಯನಗರದರಸರು ತಮ್ಮ ರಾಜಕೀಯ ಪ್ರತಿನಿಧಿಗಳಾಗಿ ಅವರಿಗೆ ಅವಕಾಶ ಮಾಡಿಕೊಟ್ಟರು. ವಿಜಯನಗರದ ಅರಸರ ಸಾಮ್ರಾಜ್ಯ ದುರ್ಬಲಗೊಂಡ ನಂತರ ತುಂಡರಸರಾದ ಸುರಾಲಿನ ತೋಳಹರು, ಗೇರುಸೊಪ್ಪೆ ಮತ್ತು ಹಾಡುವಳ್ಳಿಯ ಸಾಳುವರು, ಕಾರ್ಕಳದ ಭೈರರಸ ಒಡೆಯರು, ಬಂಗಾಡಿಯ ಬಂಗರು, ಕುಂಬಳೆಯ ಅರಸರು, ಹೊಸಂಗಡಿಯ ಕಂಬಳಿಯರಸರು, ಪುತ್ತಿಗೆ ಮೂಡಬಿದ್ರೆ ಚೌಟರು, ವಿಟ್ಲದ ಡೊಂಬ ಹೆಗ್ಗಡೆ ಅರಸರು, ಮೂಲಿಕೆಯ ಸಾವಂತರು, ವೇಣೂರಿನ ಅಜಿಲರು ಇತ್ಯಾದಿ ಅರಸರು ಸ್ಥಳೀಯವಾಗಿ ಶಕ್ತಿಶಾಲಿಯಾಗಿ ಬೆಳೆದರು.

## ಪೋರ್ಚುಗೀಸರು ಮತ್ತು ಕರಾವಳಿ ಕರ್ನಾಟಕ

ಕರಾವಳಿ ಕರ್ನಾಟಕ ಪ್ರದೇಶದಲ್ಲಿ ಪೋರ್ಚುಗೀಸರು ತಮ್ಮ ಯಜಮಾನಿತ್ವ ಗಟ್ಟಿಗೊಳಿಸಲು ಸ್ಥಳೀಯ ತುಂಡರಸರೊಂದಿಗೆ ವಿವಿಧ ಕುತಂತ್ರಗಳನ್ನು ಹೆಣೆದಿದ್ದರು. ಇಲ್ಲಿ ಹೇರಳವಾಗಿ ದೊರಕುವ ಕರಿಮೆಣಸು, ಅಕ್ಕಿ, ತೆಂಗು ಇತ್ಯಾದಿ ವಸ್ತುಗಳ ವ್ಯಾಪಾರ ವಹಿವಾಟಿನ ಮೇಲೆ ನಿಗಾಇಟ್ಟಿದ್ದರು. ಇಲ್ಲಿನ ಬೆಲೆಬಾಳುವ ವಸ್ತುಗಳು ಪೋರ್ಚುಗೀಸರನ್ನು ಆಕರ್ಷಿಸಿದ್ದು, ಈ ನಿಟ್ಟಿನಲ್ಲಿ ಅವರು ರಾಜಕೀಯ ಕುತಂತ್ರಗಳನ್ನು ರೂಪಿಸಲು ಆರಂಭಿಸಿದರು. ತಮಗೆ ಬೇಕಾದ ಕರಿಮೆಣಸು, ಅಕ್ಕಿ, ತೆಂಗು, ಅಡಿಕೆ, ಶುಂಠಿ ಇತ್ಯಾದಿ ಅಮೂಲ್ಯ ವಸ್ತುಗಳನ್ನು ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿ ಮಧ್ಯಪ್ರಾಚ್ಯ ವ್ಯಾಪಾರ ಕೇಂದ್ರಗಳಲ್ಲಿ ಮತ್ತು ಯುರೋಪಿನಲ್ಲಿ ಅತ್ಯಂತ ಹೆಚ್ಚು ಬೆಲೆಗೆ ಮಾರಾಟ ಮಾಡುವ ಆಲೋಚನೆ ಅವರದಾಗಿತ್ತು. ಕೊಚ್ಚಿನ್ ಮತ್ತು ಮಲಬಾರ್ ನಲ್ಲಿದ್ದ ಸ್ಥಳೀಯ ವ್ಯಾಪಾರಿಗಳಿಂದ ವ್ಯಾಪಾರಿ ವಸ್ತುಗಳನ್ನು ಕೊಂಡುಕೊಳ್ಳಲು ತೀವ್ರ ಪೈಪೋಟಿ ಇದ್ದು, ದುಬಾರಿ ಬೆಲೆ ಕೊಡಬೇಕಾಗಿತ್ತು. ಹೀಗೆ ಉತ್ಕೃಷ್ಟ ಗುಣಮಟ್ಟದ ವಸ್ತುಗಳನ್ನು ಕಡಿಮೆ ಬೆಲೆಗೆ ಪಡೆದುಕೊಳ್ಳುವ ಉದ್ದೇಶ ಪೋರ್ಚುಗೀಸರದಾಗಿತ್ತು. ಗೋವಾ ಮತ್ತು ಮಧ್ಯಪ್ರಾಚ್ಯ ಪ್ರದೇಶದಲ್ಲಿರುವ ವ್ಯಾಪಾರ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಮ್ಮ ಜನರಿಗೆ ಪೂರೈಸಬೇಕಾದ ಆಹಾರ ಸಂಪತ್ತು ಕರ್ನಾಟಕದಲ್ಲಿ ಹೇರಳವಾಗಿ ಲಭಿಸುತ್ತಿದ್ದು, ಸಾಗಾಟ ವೆಚ್ಚದಲ್ಲಿ ಕಡಿಮೆ ಹೂಡಿಕೆ ಹಾಗೂ ಅಧಿಕ ಲಾಭದ ನಿರೀಕ್ಷೆಯನ್ನು ಪೋರ್ಚುಗೀಸರು ಇಟ್ಟುಕೊಂಡಿದ್ದರು. ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ನಿಧಾನವಾಗಿ ಹಾಗೂ ಚಾಣಾಕ್ಷತನದಿಂದ ಸ್ಥಳೀಯ ಅರಸರೊಂದಿಗೆ ಒಪ್ಪಂದ ಮಾಡಿಕೊಳ್ಳುವ ತಂತ್ರ ರೂಪಿಸಿಕೊಂಡರು. ಬಂಗರು, ಉಳ್ಳಾಲ ಹಾಗೂ ಪುತ್ತಿಗೆ ಚೌಟರು, ಕೆಳದಿ ನಾಯಕರು, ಪೋರ್ಚುಗೀಸರೊಂದಿಗೆ ಒಪ್ಪಂದ ಮಾಡಿಕೊಂಡು ಸಹಕರಿಸಿದ್ದರು. ವ್ಯಾಪಾರ ಸುಗಮವಾಗಿ ನಡೆಯಲು ಒಳಒಪ್ಪಂದಗಳು ಏರ್ಪಟ್ಟಿದ್ದವು. ಒತ್ತಾಯಪೂರ್ವಕವಾಗಿ ಒಪ್ಪಂದವನ್ನು ಹೇರಿ ದುಬಾರಿ ಕಪ್ಪಕಾಣಿಕೆಯನ್ನು ಈ ಅರಸರಿಂದ ಪೋರ್ಚುಗೀಸರು ಪಡೆಯುತ್ತಿದ್ದರು. ದ್ವೇಷ ರಾಜಕೀಯದ ನೆಪದಲ್ಲಿ ಸ್ಥಳೀಯ ಬಂದರುಗಳನ್ನು, ಖಾಸಗಿ ಆಸ್ತಿಪಾಸ್ತಿ ಧ್ವಂಸಮಾಡುವ ಮಟ್ಟಿಗೆ ಮುಂದುವರಿದು ತಮ್ಮಅಧೀನಕ್ಕೆ ಒಳಪಟ್ಟ ವ್ಯಾಪಾರ ನೆಲೆಗಳಲ್ಲಿ ಹೆಚ್ಚು ತೆರಿಗೆ ವಸೂಲಿ ಮಾಡುತ್ತಿದ್ದರು. ಈ ಮಧ್ಯೆ ಉಳ್ಳಾಲ ರಾಣಿ ಅಬ್ಬಕ್ಕನ ಕಾಲದ ರಾಜಕೀಯವನ್ನು ಅನುಲಕ್ಷಿಸಿದರೆ ಬಹುತೇಕ ಸ್ಥಳೀಯ ರಾಜರು ಪೋರ್ಚುಗೀಸರಿಗೆ ಕಪ್ಪಕಾಣಿಕೆ ಕೊಡಲೊಪ್ಪಿದರೂ ರಾಣಿ ಅಬ್ಬಕ್ಕ ಕಪ್ಪಕಾಣಿಕೆ ಮತ್ತು ವ್ಯಾಪಾರ ತೆರಿಗೆಯನ್ನು ಕೊಡಲೊಪ್ಪಲಿಲ್ಲ.

## ವಸಾಹತು ಶಕ್ತಿಗೆ ಸವಾಲು

ಚೌಟರಸರಲ್ಲಿ ಅತ್ಯಂತ ಪ್ರಮುಖಳಾದವಳು ರಾಣಿ ಅಬ್ಬಕ್ಕ ದೇವಿ. ಬಾಲ್ಯದಲ್ಲಿ ಆಕೆ ಮೂಡಬಿದರೆಯಲ್ಲಿ ತನ್ನ ಮಾವ ತಿರುಮಲರಾಯನ ಆಶ್ರಯದಲ್ಲಿ ಬೆಳೆದಳು. ಆ ಹೊತ್ತಿಗೆ ಮೂಡಬಿದ್ರಗೆ ತಮ್ಮ ರಾಜಧಾನಿಯನ್ನು ಅವರು ವರ್ಗಾಯಿಸಿದ್ದರೂ ಸಹ ಆಡಳಿತಕ್ಕೆ ಅಗತ್ಯವಿರುವ ಪೂರಕ ವ್ಯವಸ್ಥೆಯನ್ನು ಉಳ್ಳಾಲ ಮತ್ತು ಪುತ್ತಿಗೆಯಲ್ಲಿ ಮಾಡಿಕೊಂಡಿದ್ದರು. ಮಂಗಳೂರಿನ ಹೆಚ್ಚಿನ ಪ್ರದೇಶಗಳು ನಂದಾವರದ ಬಂಗರಸನ ಅಧೀನದಲ್ಲಿದ್ದುದರಿಂದ ಅವನ ಅಳಿಯ ಲಕ್ಷ್ಮಪ್ಪ ಬಂಗರಸನೊಡನೆ, ಅಬ್ಬಕ್ಕದೇವಿಯ ವಿವಾಹದ ಪ್ರಸ್ತಾಪ ನಡೆದು, ಅದರಂತೆ ಮಂಗಳೂರಿನ ಲಕ್ಷ್ಮಪ್ಪ ಬಂಗರಸನಿಗೂ, ಅಬ್ಬಕ್ಕದೇವಿಗೂ ವಿವಾಹವಾಯಿತು. ತದನಂತರ ಅಬ್ಬಕ್ಕದೇವಿ ಉಳ್ಳಾಲದ ರಾಣಿಯಾದಳು. ಮುಂದೆ ಆಕೆ ಉಳ್ಳಾಲದಲ್ಲಿದ್ದುಕೊಂಡೇ ಆಡಳಿತವನ್ನು ನೋಡಿಕೊಂಡಳು.

ಈ ಮಧ್ಯೆ ಲಕ್ಷ್ಮಪ್ಪರಸನ ಅಳಿಯ ಕಾಮರಾಯನು ಅಬ್ಬಕ್ಕನ ವಿರುದ್ಧ ದ್ವೇಷ ಸಾಧಿಸಿ ಪೋರ್ಚುಗೀಸ್ ರೊಂದಿಗೆ ಒಪ್ಪಂದವನ್ನು ಮಾಡಿಕೊಂಡನು. ಕರಾವಳಿ ಕರ್ನಾಟಕದ ವ್ಯಾಪಾರ ವಹಿವಾಟುಗಳ ನಿಯಂತ್ರಣಕ್ಕಾಗಿ ಪೋರ್ಚುಗೀಸರು, ವಿಜಯನಗರದ ಅರಸ ರಾಮರಾಯನೊಂದಿಗೆ ಕ್ರಿ.ಶ 1547ರಲ್ಲಿ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಕರಾವಳಿಯ ಯಾವುದೇ ಸಾಮಂತ ಅರಸರು, ನಾಯಕರು, ಪೋರ್ಚುಗೀಸರಿಗೆ ಕಪ್ಪ ಕಾಣಿಕೆಯನ್ನು ಸಲ್ಲಿಸುತ್ತಿರಲಿಲ್ಲ. ಆದರೆ ಪೋರ್ಚುಗೀಸರ ದಾಳಿಯ ಭೀತಿಗೆ ಹೆದರಿದ ಬಂಗರಸನು ಕಪ್ಪ ಪಾವತಿಸುತ್ತಿದ್ದನು. ಸ್ವಾಭಿಮಾನಿಯಾದ ಅಬ್ಬಕ್ಕ ಇದನ್ನು ನಿಲ್ಲಿಸಬೇಕೆಂದು ತನ್ನ ಪತಿಗೆ ತಿಳಿಸಿದಳು. ಆದರೆ ಅಧಿಕಾರದ ಆಸೆಯಿಂದ ಲಕ್ಷ್ಮಪ್ಪ ಬಂಗರಸನ ಅಳಿಯನಾದ ಕಾಮರಾಯನು ಪಿತೂರಿಯಿಂದ ಪೋರ್ಚುಗೀಸರಿಗೆ ಸುಂಕ ನಿಲ್ಲಿಸಿದನು. ಲಕ್ಷ್ಮಪ್ಪ ಬಂಗರಸನ ಧೀರ ನಿರ್ಧಾರವನ್ನು ವಿರೋಧಿಸಲಾಯಿತು. ಈ ಘಟನೆಯಿಂದಾಗಿ ಪತಿ-ಪತ್ನಿಯರಲ್ಲಿ ವಿರಸ ಉಂಟಾಗಿ, ಅಬ್ಬಕ್ಕ ದೇವಿಯು ತನ್ನ ಪತಿ ಲಕ್ಷ್ಮಪ್ಪ ಬಂಗರಸನನ್ನು ತ್ಯಜಿಸಿ ಉಳ್ಳಾಲದ ಅರಮನೆಗೆ ಹೋದಳು.

ಅಕ್ಕಿ ಕರಿಮೆಣಸು ದಾಲ್ಚಿನ್ನಿ ಮತ್ತು ಶುಂಠಿ ಹೇರಳವಾಗಿ ಬೆಳೆಸಿ ತನ್ನದೇ ಹಡಗುಗಳ ಮೂಲಕ ಸ್ವತಂತ್ರವಾಗಿ ತನ್ನ ನಾಡಿನ ವಿದೇಶಿ ವ್ಯಾಪಾರವನ್ನು ಸಮೃದ್ಧಗೊಳಿಸಿ ಲಾಭದಾಯಕ ಉದ್ಯಮವನ್ನಾಗಿ ಪರಿವರ್ತನೆ ಮಾಡಿದಳು. ರಾಜ್ಯ ರಕ್ಷಣೆಗಾಗಿ ತನಗೆ ಎದುರಾಗುವ ಎಲ್ಲಾ ಸವಾಲುಗಳನ್ನು ನಿಭಾಯಿಸಲು ಸನ್ನದ್ಧಳಾದಳು.

ಮಂಗಳೂರಿನ ಉಳ್ಳಾಲವನ್ನು ಕ್ರಿ. ಶ1544 - 1582 ರವರೆಗೆ ಮಂಗಳೂರಿನ ಉಳ್ಳಾಲವನ್ನು ಆಳಿದ ಹೆಗ್ಗಳಿಕೆ ಎರಡನೇ

ಅಬ್ಬಕ್ಕ ದೇವಿಯದು. ಬಂಗಾಡಿಯ ಬಂಗರಸ ಲಕ್ಷ್ಮಪ್ಪ ಇವಳ ಗಂಡನೇ ಆದರೂ, ಅವರಿಬ್ಬರ ವೈವಾಹಿಕ ಸಂಬಂಧ ಮುರಿದು ಬಿದ್ದುದರಿಂದ ವೈಷಮ್ಯ ಬೆಳೆಯಿತು. ಪೋರ್ಚುಗೀಸರು ಇದನ್ನೇ ನೆಪವಾಗಿಟ್ಟುಕೊಂಡು ಬಂಗರೊಂದಿಗೆ ಸ್ನೇಹ ವ್ಯಾಪಾರ ಸಂಬಂಧವನ್ನು ವೃದ್ಧಿಸಿಕೊಂಡರು. ಉಳ್ಳಾಲದ ರಾಣಿ ಬಿಡದೆ ಜನಬೆಂಬಲದೊಂದಿಗೆ ಪ್ರತಿಭಟಿಸಿ ಯಶಸ್ಸನ್ನು ಕಂಡಳು. ಆದರೆ ಪೋರ್ಚುಗೀಸರು ಈ ಮೊದಲೇ ವಿಜಯನಗರದರಸರೊಂದಿಗೆ ಒಪ್ಪಂದ ಮಾಡಿಕೊಂಡು ಬಹುತೇಕ ಬಂದರುಗಳಿಂದ ಹೆಚ್ಚು ಪ್ರಮಾಣದ ಸುಂಕ ವಸೂಲು ಮಾಡುತ್ತಿದ್ದರು. ಬಂಗರಸ ಎರಡನೇ ಲಕ್ಷ್ಮಪ್ಪನ ಕಾಲದಲ್ಲಿ ದ್ವೇಷ ರಾಜಕೀಯದ ನೆಪದಲ್ಲಿ ಮಾಡಿಕೊಂಡ ಒಪ್ಪಂದದಿಂದ ಪೋರ್ಚುಗೀಸರಿಗೆ ಸುಂಕದ ರೂಪದಲ್ಲಿ 2400 ಮುಡಿ ಅಕ್ಕಿ ಹಾಗೂ 1,000 ಬುದ್ದಲಿ ಎಣ್ಣೆಯನ್ನು ನೀಡಬೇಕಾಗಿತ್ತು. ಇದನ್ನು ಉಳ್ಳಾಲದ ರಾಣಿಯೂ ಆದ ಲಕ್ಷ್ಮಣ ಪರಸನ ಹೆಂಡತಿ ಸಹಿಸುತ್ತಿರಲಿಲ್ಲ. ರಾಣಿಯು ಅವನ ಮೇಲೆ ಒತ್ತಡವನ್ನು ಹೇರಿ ಆತ ಪೋರ್ಚುಗೀಸರುನೊಂದಿಗೆ ಮಾಡಿಕೊಂಡ ಒಪ್ಪಂದವನ್ನು ವಿರೋಧಿಸಿ ಚೌಟರೊಂದಿಗೆ ಸ್ನೇಹದಿಂದ ಇರುವ ಇತರ ಸ್ಥಳೀಯ ಅರಸರಿಗೂ ಪೋರ್ಚುಗೀಸರಿಗೆ ಕಪ್ಪ ಕಾಣಿಕೆ ಬೆಲೆ ಬಾಳುವ ವಸ್ತುಗಳನ್ನು ಮತ್ತು ಸುಂಕವನ್ನು ಕೊಡಬಾರದೆಂದು ತಾಕೀತು ಮಾಡಿದಳು. ಯಾವುದೇ ಬೆದರಿಕೆಗೆ ಬಗ್ಗದ ಬಂಗರಸ ಪೋರ್ಚುಗೀಸರ ಸಂಪರ್ಕ ಮುಂದುವರಿಸಿ, ಅವರ ಬೆಂಬಲದಲ್ಲಿ ದೃಢ ನಂಬಿಕೆಯನ್ನು ಇಟ್ಟುಕೊಂಡಿದ್ದನು.

### ಪೋರ್ಚುಗೀಸರ ವಿರುದ್ಧ ಹೋರಾಟ

ಕ್ರಿ. ಶ 1555ರಲ್ಲಿ ಪೋರ್ಚುಗೀಸ್ ನೌಕಾಧಿಪತಿ ಡೋಮ್ ಆಲ್ವಾರಿಸ್ ಡಾ ಸ್ವಿಲೀರನು 21 ಹಡಗುಗಳೊಂದಿಗೆ ಉಳ್ಳಾಲದ ಮೇಲೆ ದಾಳಿ ಮಾಡಿದ್ದ. ಕಲ್ಲಿಕೋಟೆಯ ಜಮೋರಿನನು ಮಧ್ಯಸ್ಥಿಕೆ ವಹಿಸಿ ಅಬ್ಬಕ್ಕ ಮತ್ತು ಪೋರ್ಚುಗೀಸರ ಮಧ್ಯೆ ಒಪ್ಪಂದ ಏರ್ಪಡಿಸಲು ಪ್ರಯತ್ನಿಸಿದ. ಆದರೆ ಕ್ರಿ. ಶ 1558 ರಲ್ಲಿ ಸೇನಾಧಿಪತಿ ಪೋರ್ಚುಗೀಸ್ ಲೂಯಿಸ್ ಡೆಮೆಲ್ಲೋ ಕಣ್ಣೂರಿನ ಅರಸನ ಹಡಗೊಂದನ್ನು ವಶಪಡಿಸಲು ಪ್ರಯತ್ನಿಸಿದಾಗ ಪೋರ್ಚುಗೀಸರ ವಿರುದ್ಧವಾಗಿ ಕಣ್ಣಾನೂರಿನ ಅರಸನಿಗೆ ಸಹಾಯ ನೀಡಿದಳು.

ಕ್ರಿ. ಶ 1566ರಲ್ಲಿ ಪೋರ್ಚುಗೀಸ್ ವೈಸರಾಯ್ ಜೋ ಪಿಕ್ಸೋಟೊ ಎಂಬ ಅಧಿಪತಿಯನ್ನು ಕಳಿಸಿಕೊಟ್ಟ. ಉಳ್ಳಾಲವನ್ನು ಮುತ್ತಿದ ಪೋರ್ಚುಗೀಸರು ಆರಂಭದಲ್ಲಿ ಜಯಲಭಿಸಿದರೂ ಕೊನೆಯಲ್ಲಿ ಜೋ ಪಿಕ್ಸೋಟೊ ಕೊಲ್ಲಲ್ಪಟ್ಟು ಪೋರ್ಚುಗೀಸರಿಗೆ ಪರಾಜಯವಾಯಿತು. ಈ ಘಟನೆಯಿಂದ ಕುಪಿತಗೊಂಡ ಪೋರ್ಚುಗೀಸ್ ವೈಸರಾಯ್ ಡೋಮ್ ಇಂಟಾಓ ನೋರೋನ, ಏಳು ಯುದ್ಧ ನೌಕೆಗಳು ಮತ್ತು 27 ದೋಣಿಗಳಲ್ಲಿ ಸಾವಿರ ಯೋಧರ ಸಹಿತ ಗೋವಾದಿಂದ ಹೊರಟು, ಕ್ರಿ. ಶ 1567 ರಲ್ಲಿ ಮಂಗಳೂರಿನ ಮೇಲೆ ದಾಳಿ ಮಾಡಿದ. ರಾತ್ರಿಯೇ ಅಬ್ಬಕ್ಕ 2,000 ಸೈನಿಕರ ಒಡಗೂಡಿ ಪೋರ್ಚುಗೀಸರನ್ನು ಹಿಮ್ಮೆಟ್ಟಿಸಿದಳು. ಪೋರ್ಚುಗೀಸ್ ದಂಡನಾಯಕ ಫ್ರಾನ್ಸಿಸ್ ಮಸ್ಕರೇನಸ್ ತೀವ್ರವಾಗಿ ಗಾಯಗೊಂಡನು. ಅಬ್ಬಕ್ಕ ದೇವಿಯ ವಿಜಯ ಎಲ್ಲೆಡೆ ಹರಡಿತು.

15, 16 ಮತ್ತು 17ನೇ ಶತಮಾನಗಳಲ್ಲಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಲು ಪ್ರಯತ್ನಿಸಿದ್ದ ಪೋರ್ಚುಗೀಸರನ್ನು, ಭಾರತದ ಪೂರ್ವ ಕರಾವಳಿ, ಬಂಗಾಳ, ಕೋರಮಂಡಲ, ಮಲಬಾರ್, ಕರ್ನಾಟಕ ಕರಾವಳಿ, ಗೋವಾ ಮತ್ತು ಸೂರತ್ ಇತ್ಯಾದಿ ಕೇಂದ್ರಗಳು ಆಕರ್ಷಿಸಿದ್ದವು. ಲಾಭಗಳಿಕೆಯ ಕುತಂತ್ರ ಹೂಡಿ ವ್ಯಾಪಾರ ವಹಿವಾಟನ್ನು ನಿರಾತಂಕವಾಗಿ ಮುಂದುವರಿಸುವುದು ಹಾಗೂ ಸಂಪತ್ತು ಸಂಗ್ರಹಣೆ ಅವರ ಏಕಮಾತ್ರ ಧ್ಯೇಯವಾಗಿತ್ತು. ಕರ್ನಾಟಕದ ಕರಾವಳಿ ಭಾಗಕ್ಕೆ ಪ್ರವೇಶಿಸಿ ಚಾಣಾಕ್ಷತನದ ರಾಜಕೀಯ ಮಾಡಿ ವಿರೋಧ ಪ್ರತಿರೋಧಗಳನ್ನು ಅನುಭವಿಸಿದ್ದರು. ಅವರ ಕುತಂತ್ರವನ್ನು ರಾಣಿ ಅಬ್ಬಕ್ಕ ವಿರೋಧಿಸಿ, ಜನಬೆಂಬಲ ದೊರೆತು ಬಾಹ್ಯ ಶಕ್ತಿಯನ್ನು ವಿರೋಧಿಸುವಲ್ಲಿ ಜಯಶಾಲಿಯಾದಳು. ಮಂಗಳೂರು ಬಂದರನ್ನು ಹಿಡಿಯಲೇ ಬೇಕೆಂದು ಪಣತೊಟ್ಟಿದ್ದ ಪೋರ್ಚುಗೀಸ್ ವೈಸರಾಯ್ ನ ದಂಡನಾಯಕನಾಗಿದ್ದ ಡೋಮ್ ಅಂತೋನಿಯೋ ಡಿ ಪಿರೇರನ ನಾಯಕತ್ವದಲ್ಲಿ 500 ಜನ ಯೋಧರು, ಮಂಗಳೂರು ನಗರವನ್ನು ವಶಪಡಿಸಿದಾಗ ಸೋಲನ್ನು ಒಪ್ಪಿಕೊಳ್ಳಬೇಕಾಯಿತು. ಸ್ವಲ್ಪ ಕಾಲದಲ್ಲಿಯೇ ಮತ್ತೆ ಪೋರ್ಚುಗೀಸರ ಹೋರಾಟಕ್ಕೆ ಅಣಿಯಾದ ಅಬ್ಬಕ್ಕ ಕಲ್ಲಿಕೋಟೆಯ ರಾಜ, ಜಮೋರಿನ್ ಮತ್ತು ಕೆಳದಿಯ ವೆಂಕಟಪ್ಪನಾಯಕರ ಸಹಾಯ ಪಡೆದಳು. ಜಮೋರಿನ್ ನ ದಳಪತಿ ಕುಟ್ಟಿಪೋಕರೆ ಮತ್ತು ಅವನ ಸೈನಿಕರು ಪೋರ್ಚುಗೀಸರ ವಿರುದ್ಧ ಹೋರಾಟವನ್ನು ಆರಂಭಿಸಿದಾಗ ಈ ಪ್ರಯತ್ನವನ್ನು ವಿಫಲಗೊಳಿಸಲಾಯಿತು. ಕ್ರಿ. ಶ 1581ರ ಯುದ್ಧದಲ್ಲಿ ಪೋರ್ಚುಗೀಸರ ವಿರುದ್ಧ ಶಕ್ತಿ ಮೀರಿ ಹೋರಾಡಿದರು ಅಬ್ಬಕ್ಕ ಸೋಲೊಪ್ಪಿಕೊಳ್ಳಬೇಕಾಯಿತು.

ಅಬ್ಬಕ್ಕ ರಾಣಿಯನ್ನು ಹತ್ತಿರದಿಂದ ಕಂಡು ವರ್ಣಿಸಿದವರಲ್ಲಿ ಪಿಯತ್ರೋ ಡೆಲ್ಲವೆಲ್ಲೆ ಪ್ರಮುಖನಾಗಿದ್ದಾನೆ. ರಾಣಿಯ ಮಾತು, ಸ್ವಭಾವ, ಗುಣ ಪ್ರಜಾವಾತ್ಸಲ್ಯ ಮುಂತಾದ ವಿವರಗಳನ್ನು ಸೊಗಸಾಗಿ ಚಿತ್ರಿಸಿದ್ದಾನೆ, ಅಬ್ಬಕ್ಕ ದೇವಿಯವರ ಕುರಿತಾಗಿ ಅಂದರೆ ಹಿರಿಯ ಮತ್ತು ಕಿರಿಯ ಅಬ್ಬಕ್ಕ ದೇವಿಯರ ಕಾಲಾವಧಿಯ ಕುರಿತು ಸ್ಪಷ್ಟ ಮಾಹಿತಿಗಳು ದೊರಕುವುದಿಲ್ಲ.

### ಉಪಸಂಹಾರ

ಪೋರ್ಚುಗೀಸರನ್ನು ಗೆದ್ದ ಆಕೆಯ ಧೈರ್ಯ ಮತ್ತು ಚಾಣಾಕ್ಷತನ, ಪತಿಯ ಕುತಂತ್ರವನ್ನು ಮೆಟ್ಟಿನಿಂತ ಆಕೆಯ ಛಲ, ತನ್ನ ಸುತ್ತಲಿನ ವಿಭಿನ್ನ ಜಾತಿ ಧರ್ಮೀಯರನ್ನು ಒಗ್ಗೂಡಿಸಿ, ತನ್ನ ಹೋರಾಟದಲ್ಲಿ ಜಾತ್ಯತೀತತೆಯನ್ನು ಮೆರೆದು ಸ್ವಾಭಿಮಾನದ ಸಂಕೇತವಾಗಿ ಹೆಣ್ಣಿನ ಸ್ವಾತಂತ್ರ್ಯದ ಹರಿಕಾರಳಾಗಿ ಗಮನಾರ್ಹವಾಗಿದೆ. ಅಬ್ಬಕ್ಕನನ್ನು ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿ ಎಂದಷ್ಟೇ ಗುರುತಿಸದೆ, ದಾಸ್ಯತೆಯನ್ನು ಎದುರಿಸಿದವಳು ಎಂದಷ್ಟೇ ನೆನೆಯದೆ ಪರಕೀಯರಿಂದ ನಡೆದ ಆರ್ಥಿಕ, ಕೌಟುಂಬಿಕ ಶೋಷಣೆಯ ವಿರುದ್ಧಸಟೆದು ನಿಂತವಳು ಎಂದು ಪರಿಭಾವಿಸಬೇಕಾಗಿದೆ.

### ಪರಾಮರ್ಶನ ಗ್ರಂಥಗಳು

1. ಗಣಪತಿ ರಾವ್ ಐಗಳ್: ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ಪಾದೆಕಲ್ಲು ವಿಷ್ಣು ಭಟ್ ಮಂಗಳೂರು, 1923, ಪುನರ್ ಮುದ್ರಣ, ಮಂಗಳೂರು, 2004
2. Gururaj Bhat: Studies in Tuluva History and Culture, Manipal, 1975
3. K.V Ramesh: A History Of South Canara, Dharwad, 1975.

4. B.S Shasttry, Studies in Imdo -Portuguese History, IBH Prakashana Printers, Bangalore, 1981.
5. ಅಡ್ಯನಡ್ಕ ಕೃಷ್ಣ ಭಟ್: ಸುದರ್ಶನ, ವಿಜಯ ಕಾಲೇಜು ಟ್ರಸ್ಟ್ ಮುಲ್ಕಿ ದಕ್ಷಿಣ ಕನ್ನಡ, 1977
6. ಅಮೃತ ಸೋಮೇಶ್ವರ, ಕೆ ಆರ್ ಚಂದ್ರ: 'ಉಳ್ಳಾಲ ಇತಿ ಆದಿ', ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಲಾಲ್ ಬಾಗ್, ಮಂಗಳೂರು, 1997
7. ಸೂರ್ಯನಾಥ ಕಾಮತ್ ಯು: ಉಳ್ಳಾಲದ ರಾಣಿ ಅಬ್ಬಕ್ಕ ದೇವಿ, ಕನ್ನಡ ಶಕ್ತಿ ಕೇಂದ್ರ, ಬೆಂಗಳೂರು, 1998
8. ವಸಂತ ಮಾಧವ ಕೆ ಜಿ: ಅಬ್ಬಕ್ಕ ದೇವಿಯರು, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು, 1998


**Creative Commons (CC) License**
This article is an open access article distributed under the terms and conditions of the Creative Commons Attribution (CC BY 4.0) license. This license permits unrestricted use, distribution, and reproduction in any medium, provided the original author and source are credited.